# 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು

## ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)

**ಎಸ್.ಸಿ. ಸಂಖ್ಯೆ: 5041/2025**

ಪಿರ್ಯಾದಿ : ಕರ್ನಾಟಕ ಸರ್ಕಾರದ ಪರವಾಗಿ
ಆರಕ್ಷಕ ಉಪ ನಿರೀಕ್ಷಕರು,
ಶ್ರೀಮಂಗಲ ಪೊಲೀಸ್ ಠಾಣೆ.

**ವಿರುದ್ಧ**

ಆರೋಪಿ :1. ಬಾಳೆರ ಟಿಮ್ಸನ್ , ತಂದೆ ಲೇಟ್ ನಾಣಯ್ಯ,
ಪ್ರಾಯ:36 ವರ್ಷ. ಬೆಳ್ಳೂರು ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

2 ಬಾಳೆರ ಜ್ಯೋತಿ, ತಂದೆ ಪೌತಿ ನಾಣಯ್ಯ,
ಪ್ರಾಯ:63 ವರ್ಷ, ಬೆಳ್ಳೂರು ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ದೋಷಾರೋಪಣೆ**

ಶ್ರೀ ಎಸ್.ನಟರಾಜ್., ಬಿ.ಎ.ಎಲ್ ಎಲ್.ಎಲ್.ಬಿ., 2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೊಡಗು-ಮಡಿಕೇರಿ (ಕಾರ್ಯನಿರ್ವಹಣೆ ವಿರಾಜಪೇಟೆ) ಆದ ನಾನು ಈ ಮೇಲಿನ ಆರೋಪಿಯಾದ ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ,

ದಿನಾಂಕ 13.05.2025 **ರಂದು ಸಂಜೆ ಸುಮಾರು 04:30 ಗಂಟೆಗೆ,** ಪೊನ್ನಂಪೇಟೆ ತಾಲೂಕು, ಶ್ರೀಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳೂರು ಗ್ರಾಮದಲ್ಲಿ, ಸರ್ವೆ ನಂ. 37/1 ರ ಜಾಗದ ವಿಚಾರವಾಗಿ, 1 ಮತ್ತು 2ನೇ ಆರೋಪಿತರಾದ ನೀವು **ಸಮಾನ ಉದ್ದೇಶದಿಂದ,** ಸಾಕ್ಷಿ ನಂ.1 ಮತ್ತು 2 ರವರೊಂದಿಗೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಆ ಮೂಲಕ 1ನೇ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಲಕ ಕಲಂ 3(3) ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ಕಕ್ಷೆಯಲ್ಲಿ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ **1ನೇ ಆರೋಪಿಯಾದ ನೀನು, ಸಾಕ್ಷಿ ನಂ.2 ರವರ ತಲೆಗೆ ಕೈಯಿಂದ ಹೊಡೆದು**

17.

**ಸಾಮಾನ್ಯ ಸ್ವರೂಪದ ನೋವುಂಟು ಪಡಿಸಿದ್ದು,** ಆ ಮೂಲಕ 1ನೇ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 115(2) ಸಹವಾಲಕ ಕಲಂ 3(3) ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ಕಕ್ಷೆಯಲ್ಲಿ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ **2ನೇ ಆರೋಪಿಯು ಸಾಕ್ಷಿ ನಂ.01 ರವರ ಬೆನ್ನಿನ ಭಾಗಕ್ಕೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯ** ಉಂಟುಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 118(1) ಸಹವಾಲಕ ಕಲಂ 3(3) ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ಕಕ್ಷೆಯಲ್ಲಿ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀನು, ಸಮಾನ ಉದ್ದೇಶದಿಂದ ನಿನ್ನ ಹೆಸರಿನಲ್ಲಿ ಪರವಾನಿಗೆ ಹೊಂದಿರುವ **22 ರಿವಾಲ್ವರ್** ಅನ್ನು ಕಾರಿನಿಂದ ತೆಗೆದುಕೊಂಡು, **ಕೊಲೆ ಮಾಡುವ ಉದ್ದೇಶದಿಂದ,** ಸಾಕ್ಷಿ ನಂ.**1** ರವರ **ಬಲ ತೊಡೆಯ ಭಾಗಕ್ಕೆ** ಹಾಗೂ ಸಾಕ್ಷಿ ನಂ.**2** ರವರ **ಎಡ ಕುತ್ತಿಗೆಯ ಭಾಗಕ್ಕೆ** ಗುಂಡು ಹಾರಿಸಿ, **ತೀವ್ರ ಸ್ವರೂಪದ ಗಾಯಗಳನ್ನು ಉಂಟುಮಾಡಿ ಕೊಲೆ ಮಾಡಲು ಪ್ರಯತ್ನಿಸಿದ್ದು,** ಆ ಮೂಲಕ ಆರೋಪಿತರಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 109 ಸಹವಾಲಕ ಕಲಂ 3(3) ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ಕಕ್ಷೆಯಲ್ಲಿ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 2ನೇ ಆರೋಪಿಯಾದ ನೀನು, **ಸಾಕ್ಷಿ-1 ರವರನ್ನು ಬಿಡಬೇಡ ಗುಂಡುಹೊಡೆದು ಸಾಯಿಸು ಎಂದು 1ನೇ ಆರೋಪಿಗೆ ಪ್ರಚೋದನೆ ನೀಡಿದ್ದು,** ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 54

ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧವನ್ನು ಈ ನ್ಯಾಯಾಲಯದ ಕಕ್ಷೆಯಲ್ಲಿ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1ನೇ ಆರೋಪಿಯಾದ ನೀನು ನಿನ್ನ ಹೆಸರಿನಲ್ಲಿ ಪರವಾನಿಗೆ ಹೊಂದಿರುವ 22 ರಿವಾಲ್ವರ್ ಅನ್ನು ಪರವಾನಿಗೆಯ ಷರತ್ತುಗಳನ್ನು ಉಲ್ಲಂಘಿಸಿ, ಅಪರಾಧ ಕೃತ್ಯಕ್ಕೆ ದುರುಪಯೋಗಪಡಿಸಿಕೊಂಡಿದ್ದು, ಮೂಲಕ ಕಲಂ 30, **Arms Act, 1959** ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಕಕ್ಷೆಯಲ್ಲಿ ಎಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಆದುದರಿಂದ ನೀವು ಎಸಗಿದ ಮೇಲ್ಕಂಡ ಆರೋಪಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದಾಗಿ ನಿಮ್ಮನ್ನು ಸದ್ರಿ ಆಪಾದನೆಗಳಿಗೆ ವಿಚಾರಣೆಗೆ ಗುರಿಪಡಿಸಲು ಈ ಮೂಲಕ ನಿರ್ದೇಶಿಸುತ್ತೇನೆ.

**(ಎಸ್.ನಟರಾಜ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು–ಮಡಿಕೇರಿ (ಕಾರ್ಯನಿರ್ವಹಣೆ ವಿರಾಜಪೇಟೆ),